O.S. NO. 70/2023
PW –1 .
Dated 07–04–2026.

ಸಾಕ್ಷಿಯನ್ನು ಈ ದಿನ ದಿನಾಂಕ 07–04–2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಮುಂದುವರೆದ ಮುಖ್ಯ ವಿಚಾರಣೆಃ ವಾದಿಯರ ಪರವಾಗಿ ಶ್ರೀ ಕೆ ಎಸ್ ಕೆ ವಕೀಲರು ಮುಂದುವರೆದ ಮುಖ್ಯ ವಿಚಾರಣೆ ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಪಾಟಿ ಸವಾಲುಃ 7 ನೇ ಪ್ರತಿವಾದಿ ಪರವಾಗಿ ಶ್ರೀ ಎಸ್ ವಿ ಎಚ್ ವಕೀಲರಿಂದಃ

ನನ್ನ ಶಿಕ್ಷಣ 8 ನೇ ತರಗತಿವರೆಗೆ ಆಗಿರುತ್ತದೆ. ನನಗೆ ಕನ್ನಡ ಓದು ಬರಹ ಬರುತ್ತದೆ. ಪ್ರಸ್ತುತ ದಾವೆ ಮಾಡಲು ಯಾರು ಮಾಹಿತಿ ಕೊಟ್ಟಿಲ್ಲ ನಾನೇ ಕೊಟ್ಟಿರುತ್ತೇನೆ . ಪ್ರಸ್ತುತ ದಾವೆಯನ್ನು ಹೊಲ ವಾಟ್ನಿ ಮಾಡುವ ಸಲುವಾಗಿ ಮಾಡಿರುತ್ತೇನೆ. ದಾವಾದ ಆಸ್ತಿ ಸರ್ವೆ ನಂ. 32, 48 ಹೊಲಗಳು ಇರುತ್ತವೆ ಮತ್ತು ಊರಿನಲ್ಲಿ ಒಂದು ಮನೆ ಇದೆ. ನನ್ನ ಕಾಕಾ ಮತ್ತು ನಮ್ಮ ನಡುವೆ ವಾಟ್ನಿ ಮಾಡಬೇಕೆಂದು ದಾವೆ ಸಲ್ಲಿಸಿರುತ್ತೇವೆ. ನನ್ನ ತಂದೆ ಈಗ ಜೀವಂತ ಇದ್ದಾರೆ. ನನ್ನ ತಂದೆ ಆಸ್ತಿಯಲ್ಲಿ ಪಾಲು ಕೇಳಿ ದಾವೆ ಮಾಡಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಅವರಿಗೆ ನಮ್ಮ ಕಾಕಂದಿರು ಹೊಲ ಖರೀದಿ ಆಗಿದೆ ಎಂದು ಹೇಳುತ್ತಾರೆ ಹೀಗಾಗಿ ನಾವು ದಾವೆ ಮಾಡಿದ್ದೇವೆ. ನನ್ನ ಕಾಕಾ ಮೃತಪಟ್ಟಿರುತ್ತಾರೆ ಈಗ ಅವರ ಮಕ್ಕಳು ಹೊಲ ಖರೀದಿ ಆಗಿದೆ ಎಂದು ಹೇಳುತ್ತಿದ್ದಾರೆ. ದಾವಾ ಆಸ್ತಿಗಳನ್ನು ಹೊರತು ಪಡಿಸಿ ಮೊದಲು ನಮ್ಮ ಕುಟುಂಬಕ್ಕೆ ಪಿತ್ರಾರ್ಜಿತ ಆಸ್ತಿಗಳು ಯಾವುವು ಎಂದು ಹೇಳಲು ಬರುತ್ತಾ

O.S. NO. 70/2023

PW -1 .

Dated 07-04-2026.

ಎಂದರೆ ಇಲ್ಲ. ದಾವಾ ಆಸ್ತಿಗಳ ಮಂಜೂರಾದ ಡೈರಿಗಳನ್ನು ನೊಡಿಲ್ಲ. ನಾನು ದಾವಾ ಆಸ್ತಿಗಳ ಯಾವುದಾದರೂ ಡೈರಿಗಳನ್ನು ನೊಡಿದ್ದೀರಾ ಎಂದರೆ ಇಲ್ಲ. ದಾವಾ ಆಸ್ತಿಗಳಿಗೆ ಸಂಬಂದ ಪಟ್ಟಂತೆ 1946 ರಲ್ಲಿ 2 ಡೈರಿಗಳು ಮಂಜೂರಾಗಿರುತ್ತವೆ ಅವುಗಳ ಬಗ್ಗೆ ಗೊತ್ತಿದೇಯಾ ಎಂದರೆ ಗೊತಿರುವುದಿಲ್ಲ. 1949 ರಲ್ಲಿ ಆದ ಮಂಜೂರಾದ ಡೈರಿಗಳ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳನ್ನು ಹೊರತು ಪಡಿಸಿ ನಮ್ಮ ಕುಟುಂಬಕ್ಕೆ ಬೇರೆ ಆಸ್ತಿಗಳು ಇದ್ದರೂ ಸಹ ಅವುಗಳನ್ನು ಉದ್ದೇಶ ಪೂರ್ವಕವಾಗಿ ಬಿಟ್ಟು ದಾವಾ ಆಸ್ತಿಗಳ ಮೇಲೆ ಮಾತ್ರ ಪ್ರಸ್ತುತ ದಾವೆ ಸಲ್ಲಿಸಿದ್ದೇನೆ ಎಂದರೆ ಬೇರೆ ಆಸ್ತಿಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ.

ದಾವಾ ಮನೆ ಆಸ್ತಿಯಲ್ಲಿ ನನ್ನ ಕಾಕಾನ ಹೆಂಡತಿ ಮತ್ತು ಮಕ್ಕಳು ವಾಸಿಸುತ್ತಿದ್ದಾರೆ. ನನ್ನ ಅಜ್ಜ ಸಹೊದರರರಾದ ರಾಯಪ್ಪ ವತ್ತು ಚಂದ್ರಪ್ಪನ ಮಕ್ಕಳು ಈಗ ಅದೇ ಊರಿನಲ್ಲಿ ಬೇರೆ ಬೇರೆ ಮನೆಗಳಲ್ಲಿ ವಾಸಿಸುತ್ತಿದ್ದಾರೆ. ಅವರು ವಾಸಿಸುತ್ತಿದ ಮನೆಗಳ ಪಂಚಾಯತಿ ನಂಬರ ನನಗೆ ಹೇಳಲು ಬರುವುದಿಲ್ಲ. ಸದರಿಯವರು ಅವರವರು ಸ್ವಂತಕ್ಕೆ ಮನೆಗಳನ್ನು ಕಟ್ಟಿಸಿಕೊಂಡು ವಾಸಿಸುತ್ತಿದ್ದಾರೆ. ಅವರು ನನಗೆ ತಿಳುವಳಿಕೆ ಬಂದಾಗಿನಿಂದ ಬೇರೆ ಮನೆ ಕಟ್ಟಿಸಿಕೊಂಡು ವಾಸಿಸುತ್ತಿದ್ದಾರೆ. ಅವರ ಸಾಗುವಳಿ ಮತ್ತು ಒಕ್ಕುಲುತನ ಪ್ರತ್ಯೇಕವಾಗಿ ಮಾಡಿಕೊಂಡಿದ್ದಾರೆ ಎಂದರೆ ಸರಿ. ನಾನು ಜನಿಸುವ ಪೂರ್ವ 1975 ಇಸವಿಯಲ್ಲಿ ನನ್ನ ಅಜ್ಜ ಆತನ ಸಹೊದರರು ಆಸ್ತಿಗಳಲ್ಲಿ ಪಾಲು ವಿಬಾಗ ಮಾಡಿಕೊಂಡು ಪ್ರತ್ಯೇಕವಾಗಿ

ವಾಸಿಸುತ್ತಾ ಬಂದಿರುತ್ತಾರೆ ಎಂದರೆ ಸಾಕ್ಷಿ ಮನೆಗಳನ್ನು ಪ್ರತ್ಯೇಕ ಮಾಡಿಕೊಂಡು ವಾಸಿಸುತ್ತಿದ್ದಾರೆ ಆದರೆ ಹೊಲಗಳು ಸಾಮೂಹಿಕ ಕಬ್ಜಾ ವಹಿವಾಟ ಮಾಡುತ್ತಾ ಬಂದಿರುತ್ತಾರೆ ಎಂದು ನುಡಿದಿರುತ್ತಾರೆ. ಅವರು ಹೊಲಗಳನ್ನು ಸಾಮೂಹಿಕ ಕಬ್ಜಾ ವಹಿವಾಟ ಮಾಡುತ್ತಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1973 ಇಸವಿಯಲ್ಲಿ ನನ್ನ ಮುತ್ತಜ್ಜ ದೇಮಪ್ಪ ಮೃತಪಟ್ಟನು ಎಂದರೆ ಸರಿ. ನನ್ನ ಅಜ್ಜ ಬಾಲಪ್ಪ 1972 ರಲ್ಲಿ ಮೃತಪಟ್ಟನು ಎಂದರೆ ನನಗೆ ಇಸವಿ ಗೊತ್ತಿಲ್ಲ. ಸದರಿ ದೇಮಪ್ಪ ಮೃತಪಟ್ಟ ನಂತರ ನನ್ನ ಅಜ್ಜಿ ಚನ್ನಮ್ಮ ಮತ್ತು ನನ್ನ ಅಜ್ಜನ ಸಹೋದರರಾದ ರಾಯಪ್ಪ ಹಾಗೂ ಚಂದ್ರಪ್ಪ ನಡುವೆ ಕೂಡಿ ನಡೆಯದ ಕಾರಣ 1975 ರಲ್ಲಿ ಹಿರಿಯರ ಸಮಕ್ಷಮ ಅವರು ಆಸ್ತಿಗಳನ್ನು ವಾಟ್ನಿ ಮಾಡಿಕೊಂಡು ಪ್ರತ್ಯೇಕ ಕಬ್ಜಾ ವಹಿವಾಟ ಮಾಡುತ್ತಾ ಬಂದಿರುತ್ತಾರೆ ಎಂದರೆ ಸಾಕ್ಷಿ ವಾಟ್ನಿ ಆಗಿರುವುದಿಲ್ಲ ಎಂದು ನುಡಿದಿರುತ್ತಾರೆ. ಉತಾರದಲ್ಲಿ ಆಸ್ತಿಗಳು ಸಾಮೂಹಿಕ ವಾಗಿಹಿ ಕಾಣಿಸಿದರು ವಾಸ್ತವಿಕವಾಗಿ 1975 ರಲ್ಲಿ ವಾಟ್ನಿ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ವಾಟ್ನಿ ಪ್ರಕಾರ ನನ್ನ ಅಜ್ಜಿ ಮತ್ತು ಆಕೆಯ ಮಕ್ಕಳು ಹಾಗೂ ನನ್ನ ಅಜ್ಜನ ಸಹೋದರರು ತಮ್ಮ ತಮ್ಮ ಹಿಸ್ಸೆ ಆಸ್ತಿಗಳನ್ನು ಪ್ರತ್ಯೇಕ ಸಾಗುವಳಿ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದುಡಲಾಯಿತು . )

O.S. NO. 70/2023

PW -1 .

Dated 07-04-2026.

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.